ಮೂಲ ದಾವಾ ಸಂಖ್ಯೆ 19/2016
ಪಿ ಡಬ್ಲ್ಯೂ-2

**(ದಿನಾಂಕ 27.10.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು 2 ನೇ ಪ್ರತಿವಾದಿ ಪರ ಶ್ರೀ B.K.M. ವಕೀಲರಿಂದಃ-**

25 ವರ್ಷದ ಹಿಂದೆ ಆಸ್ತಿ ಖರೀದಿಸಿರುತ್ತಾರೆ ನನಗೆ ಅದರ ಬಗ್ಗೆ ವೈಯಕ್ತಿಕ ಮಾಹಿತಿ ಇರುತ್ತದೆ. ಆ ಕಾಲಕ್ಕೆ ನಾನು ಅಪ್ರಾಪ್ತ ವಯಸ್ಕನಾಗಿದ್ದೆ ಎಂದರೆ ಸರಿ. ಖರೀದಿ ಪತ್ರ ಎಷ್ಟು ಮೊತ್ತಕ್ಕೆ ಬರೆದಿದ್ದಾರೆ ಅಂತಾ ನನಗೆ ಗೊತ್ತಿಲ್ಲಾ ಎಂದರೆ ಸರಿ. ಸರ್ವೆ ನಂಬರ 539/ಬಿ/1ಬಿ ಅಂತಾ ಯಾವ ಆಧಾರದ ಮೇಲೆ ಬರೆಸಿದ್ದೇನೆ ಎಂದರೆ ಸಾಕ್ಷಿ ಉತ್ತರ ಕೊಡುವುದಿಲ್ಲಾ. ಸದರಿ ಆಸ್ತಿ ಸರ್ವೆ ನಂಬರ 539/ಬಿ/1ಬಿ ಹರಪನಹಳ್ಳಿ ಸಂಬಂದಿಸಿದ್ದು ಇರುತ್ತದೆ ಅದರ ವಿಸ್ತೀರ್ಣ ಗೊತ್ತಿಲ್ಲಾ. ಮೂಲ ಮಾಲೀಕರು ಯಾರು ಎಂದರೆ ಗೊತ್ತಿಲ್ಲಾ. ಲಕ್ಷ್ಮಪ್ಪ ಮಾಲೀಕ ಇರುತ್ತಾನೆ. ಸರ್ವೆ ನಂಬರ 539/ಬಿ/1ಬಿ ಅಸ್ತಿತ್ವದಲ್ಲಿ ಇಲ್ಲಾ ಎಂದರೆ ಸರಿಯಲ್ಲ.ಸರ್ವೆ ನಂಬರ 539/ಬಿ/1ಬಿ ನಾನು ಪಹಣಿ ನೋಡಿರುತ್ತೇನೆ. ಸರ್ವೆ ನಂಬರ 539/ಬಿ/1ಬಿ ಲಕ್ಷ್ಮಪ್ಪನಿಗೆ ಆಸ್ತಿ ಹೇಗೆ ಬಂತು ಅಂತಾ ನನಗೆ ಗೊತ್ತಿಲ್ಲಾ. ಸರ್ವೆ ನಂಬರ 539/ಬಿ/1ಬಿ ಆಸ್ತಿಯನ್ನು ಸರ್ಕಾರದವರು ತೆರವು ಮಾಡಿ ವರದಿ ಕೂಡ ನೀಡಿರುತ್ತಾರೆ ಎಂದರೆ ಸರಿ. ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಅಮೀನ್ ಮಹಮ್ಮದ್ ರವರು ನಡೆಸುತ್ತಿದ್ದ ಪ್ರಕರಣದಲ್ಲಿ ಪುರಸಭೆಯವರು ಸ್ವಾಧೀನ ತಪ್ಪಿಸಿದ್ದಾರೆ ಅಂತಾ ತಿಳಿಸಿರುತ್ತಾರೆ ಎಂದರೆ ಸರಿ. ಅಮೀನ್ ಮಹಮ್ಮದ್ ರವರು ಗುಜರಿ ಅಂಗಡಿ ನಡೆಸಲು ಲೈಸೆನ್ಸ್ ಪಡೆದಿರುತ್ತಾರೆ. ನಾನು ಲೈಸೆನ್ಸ್ ನೋಡಿರುವುದಿಲ್ಲಾ. ಲೈಸೆನ್ಸ್ ಇದೆ ಅಂತಾ ನಾನು ವಾದಿಯ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ದಕ್ಷಿಣ ದಿಕ್ಕಿನಲ್ಲಿ 2 ಮನೆಯ ನಂತರ ನನ್ನ ಮನೆ ಇದೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮಿಲಾಪೆ ಆಗಿ ಕಾಳಮ್ಮ ದೇವಸ್ಥಾನದ ಆಸ್ತಿಯನ್ನು

ಎತ್ತಿ ಹಾಕಲು ಒಬ್ಬರಿಗೊಬ್ಬರು ಸುಳ್ಳು ಸಾಕ್ಷಿ ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ದಕ್ಷಿಣ ದಿಕ್ಕಿನಲ್ಲಿ 2 ಮನೆಯ ನಂತರ ನನ್ನ ಮನೆ ಇದೆ ಅಂತಾ ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿರುವುದಿಲ್ಲಾ ಎಂದರೆ ಸರಿ.

**ಪಾಟೀ ಸವಾಲು 3 ನೇ ಪ್ರತಿವಾದಿ ಪರ ಶ್ರೀ B.H. ವಕೀಲರಿಂದಃ-**

ನನ್ನ ತಾಯಿ ಹೊಟಲ್ ನಡೆಸುತ್ತಾರೆ ಎಂದರೆ ಸರಿ. ನಾನು ಈಗ ಹೋಟಲ್ ನಡೆಸುತ್ತೇನೆ ಎಂದರೆ ಸರಿ. ಸಾಕ್ಷಿ ಪ್ರಮಾಣ ಪತ್ರದಲ್ಲಿ ವ್ಯವಸಾಯ ಅಂತಾ ಬರೆಸಿರುತ್ತೇನೆ ಎಂದರೆ ಸರಿ. ನಾನು ವ್ಯವಸಾಯ ಮಾಡುವುದಿಲ್ಲಾ ಎಂದರೆ ಸರಿ. ದಾವಾ ಆಸ್ತಿ ಸರ್ವೆ ನಂಬರ ಗೊತ್ತಿಲ್ಲಾ. ದಾವಾ ಆಸ್ತಿ ಮೂಲತಃ ಲಕ್ಷ್ಮಪ್ಪನಿಗೆ ಸೇರಿದ್ದು. ಲಕ್ಷ್ಮಪ್ಪನಿಗೆ ದಾವಾ ಆಸ್ತಿ ಹೇಗೆ ಬಂತು ಅಂತಾ ಗೊತ್ತಿಲ್ಲಾ. ನಾನು ನ್ಯಾಯಾಲಯಕ್ಕೆ ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲಾ. ಅಮೀನ್ ಮಹಮ್ಮದ್ ನ್ಯಾಯಾಲಯಕ್ಕೆ ಬಾ ಅಂತಾ ಕರೆದ ಕಾಕರಣ ಬಂದಿರುತ್ತೇನೆ ಎಂದರೆ ಸರಿ. ಅಮೀನ್ ಮಹಮ್ಮದ್ ಸಹಿ ಮಾಡು ಅಂತಾ ಹೇಳಿದ ಕಾರಣ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನೋಂದಾದ ಬಗ್ಗೆ ನನಗೆ ಗೊತ್ತಿಲ್ಲಾ. ಯಾರಿಗೆ ದಾಖಲೆ ಮಾಡಿಕೊಟ್ಟಿರುತ್ತಾರೆ ಅಂತಾ ನನಗೆ ಗೊತ್ತಿಲ್ಲಾ ಎಂದರೆ ಸರಿ. ನನ್ನ ಎರಡು ಮನೆಗಳ ಡೋರ ನಂಬರ 2908. ಅದು ಯಾವ ವಾರ್ಡನಲ್ಲಿ ಬರುತ್ತದೆ ಗೊತ್ತಿಲ್ಲಾ. ದಾವಾ ಆಸ್ತಿ ಯಾವ ವಾರ್ಡನಲ್ಲಿ ಬರುತ್ತದೆ ಗೊತ್ತಿಲ್ಲಾ. ನನಗೆ ದಾವಾ ಆಸ್ತಿ ಬಗ್ಗೆ ಏನು ಗೊತ್ತಿಲ್ಲದೇ ಇದ್ದರೂ ವಾದಿಗಳ ಪರವಾಗಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಲೀಮುಲ್ಲಾ ನನ್ನ ತಾಯಿ ಹೊಟಲ್ ನಲ್ಲಿಯೇ ಮೊದಲಿನಿಂದ ಟೀ, ಕುಡಿಯಲು ತಿಂಡಿ ತಿನ್ನಲು ಬರುತ್ತಿದ್ದರು ಎಂದರೆ ಸರಿ. ಕಲೀಮುಲ್ಲಾ ನನ್ನ ಪರವಾಗಿ ಸಾಕ್ಷಿ ನುಡಿಯದಿದ್ದರೇ ನನ್ನ ತಾಯಿ ಹೊಟಲ್ ನಲ್ಲಿ ಟೀ, ಕುಡಿಯಲು ತಿಂಡಿ ತಿನ್ನಲು

ಮೂಲ ದಾವಾ ಸಂಖ್ಯೆ 19/2016

ಪಿ ಡಬ್ಲ್ಯೂ-2

ಕೊಡುವುದಿಲ್ಲಾ ಅಂತಾ ಹೇಳಿರುತ್ತಾರೆ ಎಂದರೆ ಸರಿಯಲ್ಲ. ನನ್ನ ವೃತ್ತಿಯನ್ನು ಹೋಟಲ್ ವ್ಯಾಪಾರ ಅಂತಾ ಬರೆಸಿಲ್ಲಾ ಎಂದರೆ ಸರಿ. ನನ್ನ ವೃತ್ತಿಯನ್ನು ವ್ಯವಸಾಯ ಅಂತಾ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ

ನ್ಯಾಯಾಧೀಶರು, ಹರಪನಹಳ್ಳಿ.